**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**
**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ವಿ ಓ ವಕೀಲರಿಂದಃ**

1. ನನ್ನ ವಿಳಾಸ ಅಳಗವಾಡಿ. ಪ್ರತಿವಾದಿಗಳ ಊರು ಪುಡುಕನಹಳ್ಳಿ. ವಾದಿ ಊರು ಅಳಗವಾಡಿ. ವಾದಿ ಚದರಗೋಳದಲ್ಲಿ ವಾಸ ಅಳಗವಾಡಿಯಲ್ಲಿ ಅಲ್ಲ ಎಂದರೆ ಸರಿಯಲ್ಲ. ಪ್ರಾಮಿಸರಿ ಪತ್ರದ ವಿಚಾರ ಸಂಪೂರ್ಣವಾಗಿ ಗೊತ್ತಾ ಎಂದರೆ ಹೌದು. ಪ್ರಾಂಸರಿ ಪತ್ರ ಹನುಮಂತಪ್ಪ ತಯಾರು ಮಾಡಿಸಿ ತಂದಿರುತ್ತಾರೆ. ಪ್ರಾಂಸರಿ ಪತ್ರದಲ್ಲಿ ವಾದಿಯ ವಿಳಾಸ ಬಿಳಿಚೋಡು ಹೋಬಳಿ ಚದರಗೋಳ ಗ್ರಾಮ ಎಂದು ಇದೆ ಎಂದರೆ ವಾದಿಯ ವಿಳಾಸ ಅಳಗವಾಡಿಯೇ ಆದರೆ ಚದರಗೋಳ ಆಕೆಯ ಗಂಡನ ಮನೆ ಆದ್ದರಿಂದ ಎರಡೂ ಕಡೆ ಬಂದು ಹೋಗಿ ಮಾಡುತ್ತಾರೆ. ನಿಪಿ.1 ರಲ್ಲಿ ಚದರ ಗೋಳ ಅಂತ ಇದೆ ಅಳಗವಾಡಿ ಅಂತ ಯಾಕೆ ಬರೆಸಿಲ್ಲ ಅಂತ ಕೇಳಿದಿರಾ ಎಂದರೆ ಇಲ್ಲ. ಈ ಪ್ರಾಂಸರಿಯ ಪೂರ್ಣ ಮಾಹಿತಿ ನನಗೆ ಗೊತ್ತಿಲ್ಲ ಆದ್ದರಿಂದ ನಾನು ಆ ರೀತಿ ಕೇಳಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು 01.04.2023 ರಂದು ನಮ್ಮ ಮನೆಗೆ ಬಂದಿದ್ದರು. ಪ್ರಾಂಸರಿ ಪತ್ರ 01.04.2023 ರಂದು ಆಯಿತಾ ಅಥವಾ ಬೇರೆ ದಿನ ಎಂದರೆ ಇನ್ನೊಂದು ದಿನ ಎಂದು ಹೇಳುತ್ತಾರೆ. ಅದೇರೀತಿ ಹಣವನ್ನು ಯಾವ ದಿನ ಕೊಟ್ಟಿದ್ದಾರೆ ಎಂದರೆ 01.04.2023 ರಂದು ಎಂದು ಹೇಳುತ್ತಾರೆ. ಹಣ ಕೊಟ್ಟ ದಿನವೇ ಪ್ರಾಂಸರಿ ಪತ್ರ ಆಗುವುದು ನಿಯಮ ಅಲ್ಲವೇ ಎಂದರೆ ಅವರಿಬ್ಬರಿಗೂ ತುಂಬಾ ಪರಿಚಯ ಇತ್ತು ಹಣದ ಅವಶ್ಯಕತೆ ತುಂಬಾ ಇದ್ದುದರಿಂದ ಮೊದಲು ಹಣ ಕೊಟ್ಟರು ನಂತರ ಪ್ರಾಂಸರಿ ಪತ್ರ ಆಯಿತು ಎಂದು ಹೇಳುತ್ತಾರೆ. ಹಣ ಕೊಟ್ಟ ದಿನ ಪ್ರಾಂ ಸರಿ ಪತ್ರ ಬರೆದುಕೊಡಿ ಅಂತ ಕೇಳಿದಿರಾ ಎಂದರೆ ಹೌದು ಆದರೆ ಅವರು ಹಣದ ಅವಶ್ಯಕತೆ ತುಂಬಾ ಇದೆ ಹಣ ಕೊಡಿಸಿ ಅಂತ ಕೇಳಿದರು ಎಂದು ಹೇಳುತ್ತಾರೆ. 15 ದಿನ ಪ್ರಾಂ ಸರಿ ಪತ್ರ ಬರೆಯದೇ ಕೊಡಲು ಅವಶ್ಯಕತೆ ಇತ್ತ ಎಂದರೆ ಹೌದು ಕಾರಣ ಅವರು ಪರಿಚಯಸ್ತರಾಗಿದ್ದರು ಆದ್ದರಿಂದ ತಡವಾಗಿ ಬರೆಸಿಕೊಂಡರು. ನಂತರ

ವಾದಿ ಪುನಃ17.05.2023 ರಂದು ಏಕಾಂತಪ್ಪರವರ ಮನೆಗೆ ಬಂದು ನಮ್ಮ ಮನೆಗೆ ಬಂದರು. ನನ್ನ ಸಮಕ್ಷಮದಲ್ಲಿ ಪ್ರಾಂಸರಿ ಪತ್ರ ಆಯಿತಾ ಎಂದರೆ ಹೊರಗಡೆ ಬರೆಸಿಕೊಂಡು ಬಂದಿದ್ದರು ಎಂದು ಹೇಳುತ್ತಾರೆ. ಈ ಪ್ರಾಂಸರಿ ಪತ್ರ ಆಗುವ ಕಾಲಕ್ಕೆ ನನ್ನನ್ನು ಹೊರತುಪಡಿಸಿ ವಾದಿ, ಪ್ರತಿವಾದಿ, ಏಕಾಂತಪ್ಪ ಇದ್ದರು. ಈ ಪ್ರಾಂಸರಿ ಒಕ್ಕಣಿಕೆಯಲ್ಲಿ ಎಲ್ಲರ ಹೆಸರು ಬಂತ ಎಂದರೆ ಹೌದು. ಒಬ್ಬ ಮಗನ ಹೆಸರು ಬಿಟ್ಟಿದ್ದರು, ಏನೂ ಆಗಲ್ಲ ಸಹಿ ಹಾಕಿ ಎಂದರು ಹಾಕಿದೆವು. ಇನ್ ಕಂಪ್ಲೀಟ್ ಡಾಕುಮೆಂಟ್ ಇರುವುದರಿಂದ ಆ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಹೌದು. ಪ್ರಾಂಸರಿ ಪತ್ರ ವಾದಿಯ ಮನೆಯಲ್ಲಿ ಪ್ರತಿವಾದಿ, ನಾನು ಮತ್ತು ಏಕಾಂತಪ್ಪ ಸಹಿ ಮಾಡಿರುತ್ತೇವೆ. ಯಾವುದೇ ಪತ್ರ ಮಾಡುವಾಗ ಪ್ರತಿ ಪೇಜ್ ನಲ್ಲಿ ಎಲ್ಲರ ಸಹಿ ಇರಬೇಕೊ ಬೇಡವೊ ಎಂದರೆ ಆಗೇನಿಲ್ಲ. ಸಹಿ ಮಾಡುವ ಮೊದಲು ಎಲ್ಲಿ ಸಹಿ ಮಾಡಬೇಕು ಅಂತ ಮಾರ್ಕ್ ಮಾಡುವ ಅಗತ್ಯ ಪಾರ್ಟಿಗಳು ಇದ್ದಾಗ ಇರಲ್ಲ ಎಂದರೆ ಹಾಗೇನಿಲ್ಲ ಸರ್ವೆ ಸಾಮಾನ್ಯವಾಗಿ ದಾಖಲೆಗಳು ಮಾಡಿದಾಗ ಸಹಿ ಮಾಡಲು ಗುರುತು ಮಾಡುವುದು ಇದೆ ಎಂದು ಹೇಳುತ್ತಾರೆ. ಪ್ರಾಂಸರಿ ಪತ್ರದ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಹಣವನ್ನು ಯಾರಿಂದ ಎಲ್ಲಿಂದ ತಂದರು ಎಂದರೆ ಅವರು ಅನುಕೂಲಸ್ತರು ಅವರ ಹತ್ತಿರ ಹಣ ಇತ್ತು ಎಂದು ಹೇಳುತ್ತಾರೆ. ಪ್ರತಿವಾದಿಯರು ತೋಟವನ್ನು ಮಾಡಿಕೊಂಡು ಸಂತೃಪ್ತಿಯಾಗಿ ಜೀವನ ನಡೆಸುತಿದ್ದಾರೆ ಎಂದರೆ ಇರಬಹುದು. ನಾನು ಮತ್ತು ವಾದಿ ಸಂಬಂದಿಕರು ಎಂದರೆ ಸರಿಯಲ್ಲ ಗ್ರಾಮಸ್ತರು. ದಾಖಲಾತಿ ಆದಾಗ ಸಮಯ 1.30 ಗಂಟೆ ಆಗಿತ್ತು. ಪ್ರತಿವಾದಿಯರೇ ದಾಖಲಾತಿ ತಯಾರು ಮಾಡಿಸಿಕೊಂಡು ಬಂದರಾ ಎಂದರೆ ಹೌದು. ಪ್ರಾಂಸರಿ ಪತ್ರ ಎಲ್ಲಿಂದ ತಂದರು ವಿಚಾರ ನನಗೆ ಗೊತ್ತಿಲ್ಲ ಎಂದರೆ ಹೌದು. ನಾವು ವಾದಿಯರು ಸಂಬಂದಿಕರಾಗಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ವಾದಿ ಕುಟುಂಬದ ಸದಸ್ಯರು ನನಗೆ ಚೆನ್ನಾಗಿ ಗೊತ್ತು ಎಂದರೆ ಹೌದು. ವಾದಿಯ ಮಗಳು ಪ್ರತಿವಾದಿ ಜೊತೆ ಒಂದು ಖರೀದಿ ಕರಾರು ಮಾಡಿಕೊಂಡರು ಅದರ ಬಾಬ್ತು ಈ ಪ್ರಾಂಸರಿ ಪತ್ರ ಬೇರೆ ವ್ಯವಹಾರಕ್ಕೆ ಸೃಷ್ಟಿ ಮಾಡಿದ್ದಾರೆ ಎಂದರೆ ಸುಳ್ಳು.

ನಾಮಕಾವಸ್ತೆಗಾಗಿ ಈ ಪ್ರಾಂಸರಿ ಪತ್ರ ಮಾಡಿರುತ್ತಾರೆ ಎಂದರೆ ಸುಳ್ಳು. ನಾನು ಪ್ರತಿವಾದಿಯರಿಂದ 8 ಲಕ್ಷ ವಸೂಲಾತಿ ಮಾಡಲು ಸುಳ್ಳು ಕೇಸು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**
**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**